ವಿಷಯ:- ರಾಜ್ಯದಲ್ಲಿರುವ ಎ.ಪಿ.ಎಂ.ಸಿ.ಗಳಿಂದ ರೈತರಿಗೆ ಆಗುತ್ತಿರುವ ತೊಂದರೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ ೯೫:- (೨೯೩)

ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ)

ಮಾನ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೈತರು ಬೆಳೆದ ಮಾಲನ್ನು ಮಾರುಕಟ್ಟೆಗೆ ಮಾರಾಟ ಮಾಡಲು ಕೊಟ್ಟಾಗ್ಯೂ ರೈತರಿಗೆ ಪಟ್ಟಾ ಮಾಡುವುದು ವಿಳಂಬವಾಗಲು ಕಾರಣವೇನು?

ಆ) ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಇ) ರೈತನು ಬೆಳೆದ ಮಾಲುಗಳನ್ನು ಸರಿಯಾಗಿ ತೂಕ ಮಾಡದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಆಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಈ) ಎ.ಪಿ.ಎಂ.ಸಿ.ಯಿಂದ ರೈತರು ಬೆಳೆದ ಮಾಲುಗಳನ್ನು ಖರೀದಿ ಮಾಡುವ ವಿಚಾರ ಸರ್ಕಾರಕ್ಕೆ ಇದೆಯೇ?

ಉ) ರೈತರು ಮಾಲನ್ನು ಮಾರುಕಟ್ಟೆಗೆ ಮಾರಾಟ ಮಾಡದೇ ಇರುವ ಬಗ್ಗೆ ಹಾಗೂ ವ್ಯಾಪಾರಸ್ಥರಿಂದ ರೈತರಿಗೆ ಹಣ ಬಾರದೇ ಇರುವ ಬಗ್ಗೆ ಎ.ಪಿ.ಎಂ.ಸಿ. ಯವರು ತೆಗೆದುಕೊಂಡ ಕ್ರಮವೇನು?

ಊ) ವ್ಯಾಪಾರಸ್ಥರು ರೈತರಿಗೆ ಪಟ್ಟಾ ಕೊಡದೇ ದಿವಾಳಿಯಾದಲ್ಲಿ ರೈತನ ಹಣವನ್ನು ಕೊಡುವ ಜವಾಬ್ದಾರಿ ಎ.ಪಿ.ಎಂ.ಸಿ.ಯವರದೇ?

ಶ್ರೀ ಮದನಗೋಪಾಲ ನಾಯಕ್
(ಕೃಷಿ ಮಾರುಕಟ್ಟೆ ರಾಜ್ಯ ಸಚಿವರು)

ಕೆಲವೊಂದು ಹತ್ತಿ ಮಾರುಕಟ್ಟೆಗಳನ್ನು ಹೊರತುಪಡಿಸಿ ಉಳಿದ ಉತ್ಪನ್ನಗಳ ಮಾರಾಟವಾದ ಕೂಡಲೇ ಪಟ್ಟಿ ತೀರುವಳಿ ಆಗುತ್ತದೆ. ಸಾಮಾನ್ಯವಾಗಿ ಹತ್ತಿಯನ್ನು ದಲ್ಲಾಲರ ಮೂಲಕ ಮಾರಾಟ ಮಾಡಿದರೆ ಸಂಬಂಧಪಟ್ಟ ದಲ್ಲಾಲರು ರೈತರಿಗೆ ಕೂಡಲೇ ಹಣ ಪಾವತಿ ಮಾಡಬೇಕಾಗುವುದು. ಖರೀದಿದಾರರಿಗೆ ಸಾಲದ ಆಧಾರದ ಮೇಲೆ ಮಾಲನ್ನು ಡೆಲಿವರಿ ನೀಡುವುದಕ್ಕಾಗಿ ಕಾಯ್ದೆಯಲ್ಲಿ ಅವಕಾಶವಿದೆ. ಇಂತಹ ಪ್ರಕರಣಗಳಲ್ಲಿ ಬೈಲಾಗಳಲ್ಲಿ ನಿಗಧಿಪಡಿಸಿರುವಂತೆ ಒಂದು ವಾರದವರೆವಿಗೆ ಖರೀದಿದಾರರು ದಲ್ಲಾಲರಿಗೆ ಹಣ ಪಾವತಿ ಮಾಡಲು ಅವಕಾಶ ನೀಡಲಾಗುವುದು. ಇಂತಹ ಪ್ರಕರಣಗಳಲ್ಲಿ ರೈತರಿಗೆ ಹಣ ಪಾವತಿ ಮಾಡಲು ಸ್ವಲ್ಪ ವಿಳಂಬವಾಗುವ ಸಾಧ್ಯತೆ ಇದೆ.

ಬಂದಿರುತ್ತದೆ.

ದಲ್ಲಾಲರು ಮತ್ತು ವರ್ತಕರಿಂದ ಹಣವನ್ನು ವಸೂಲಿ ಮಾಡಿ ರೈತರಿಗೆ ವಿಳಂಬವಾಗದೆ ಪಾವತಿಮಾಡಿಸಲು ಮತ್ತು ಪಾವತಿ ಮಾಡುವಲ್ಲಿ ವ್ಯತಿರಿಕ್ತವಾಗಿ ನಡೆದುಕೊಳ್ಳುವಂತಹ ಖರೀದಿದಾರರು ಮತ್ತು ದಲ್ಲಾಲರ ಮೇಲೆ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ, ೧೯೬೬, ನಿಯಮಾವಳಿಗಳು, ೧೯೬೮ ಹಾಗೂ ಮಾರುಕಟ್ಟೆ ಸಮಿತಿಯ ಉಪನಿಯಮಗಳ ಪ್ರಕಾರ ಕ್ರಮ ಜರುಗಿಸಲು ಮಾರುಕಟ್ಟೆ ಸಮಿತಿಗಳಿಗೆ ನಿರ್ದೇಶನ ಕೊಡಲಾಗಿದೆ.

ರೈತನು ಮಾರುಕಟ್ಟೆಗೆ ತಂದ ಮಾಲನ್ನು ಸರಿಯಾಗಿ ತೂಕಕ್ಕೊಳಪಡಿಸಲು, ಎಲ್ಲಾ ಮಾರುಕಟ್ಟೆಗಳಲ್ಲಿಯೂ ಸಮಿತಿಗಳಿಂದ ಲೈಸೆನ್ಸ್ ಪಡೆದೆ ತೂಕದವರನ್ನು ನೇಮಿಸಲಾಗಿದೆ.

ಅವಶ್ಯಕವಾದ ಮಾಲನ್ನು ನಿಖರವಾದ ತೂಕದ ವ್ಯವಸ್ಥೆಗೆ ಒಳಪಡಿಸುವುದು ತೂಕದವರ ಹೊಣೆಯಾಗುತ್ತದೆ. ನಿರ್ದಿಷ್ಟವಾದ ಪ್ರಕರಣಗಳಲ್ಲಿ ತೂಕದಲ್ಲಿ ಮೋಸ ನಡೆದಿರುವುದನ್ನು ರೈತರು ನೇರವಾಗಿ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಯವರಿಗೆ ದೂರು ಕೊಡಲು ಅವಕಾಶವಿದೆ.

ಇಂತಹ ಖರೀದಿಗೆ ಮಾರುಕಟ್ಟೆ ಕಾಯ್ದೆಯಲ್ಲಿ ಅವಕಾಶ ಇರುವುದಿಲ್ಲ.

ಕೃಷಿ ಉತ್ಪನ್ನಗಳನ್ನು ವ್ಯಾಪಾರಸ್ಥರು ಹಳ್ಳಿಗಳಲ್ಲಿ ಖರೀದಿಸುವುದನ್ನು ಮಾರುಕಟ್ಟೆ ಕಾಯ್ದೆಯಲ್ಲಿ ನಿಷೇಧಿಸಲಾಗಿದೆ. ಸಹಕಾರಿ ಸಂಘಗಳನ್ನು ಹೊರತುಪಡಿಸಿ ಹಳ್ಳಿಗಳಲ್ಲಿ ಹುಟ್ಟುವಳಿಗಳನ್ನು ಖರೀದಿಸುವ ವ್ಯಾಪಾರಸ್ಥರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಹಾಗೂ ರೈತರಿಗೆ ಹಣ ಪಾವತಿ ವಿಳಂಬ ಮಾಡುವ ವರ್ತಕರ ಲೈಸೆನ್ಸ್‌ಗಳನ್ನು ಅಮಾನತ್ತು ಅಥವಾ ರದ್ದುಪಡಿಸುವಂತಹ ಕ್ರಮಗಳನ್ನು ಮಾರುಕಟ್ಟೆ ಸಮಿತಿಗಳು ಕೈಗೊಳ್ಳುತ್ತವೆ.

ಇಂತಹ ಪ್ರಸಂಗಗಳಲ್ಲಿ ಮಾರುಕಟ್ಟೆ ಸಮಿತಿಯಿಂದ ಹಣ ಪಾವತಿ ಮಾಡಲು ಮಾರುಕಟ್ಟೆ ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ.

ವಿಷಯ:- ಕಲಘಟಗಿ ತಾಲ್ಲೂಕಿಗೆ ಪ್ರತ್ಯೇಕ ಎ.ಪಿ.ಎಂ.ಸಿ.ಮಾರುಕಟ್ಟೆ ಸಮಿತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೯೬:- (೨೯೪)

ಶ್ರೀ. ಪಿ.ಸಿ. ಸಿದ್ದನ್ನಗೌಡರ್ (ಕಲಘಟಗಿ)

ಮಾನ್ಯ ವ್ಯವಸಾಯೋತ್ಪನ್ನಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಲಘಟಗಿ ತಾಲ್ಲೂಕಿಗೆ ಪ್ರತ್ಯೇಕ ಒಕ್ಕಲುತನ ಹುಟ್ಟುವಳಿ ಮಾರಾಟ ಸಮಿತಿ ಮಾಡುವ ನಿರ್ಣಯ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ ಅದನ್ನು ಮಾಡದಿರುವುದಕ್ಕೆ ಕಾರಣವೇನು?

ಇ) ಹುಬ್ಬಳ್ಳಿ ಎ.ಪಿ.ಎಂ.ಸಿ.ಯಿಂದ ಕಲಘಟಗಿ ಮಾರ್ಕೆಟ್ ಯಾರ್ಡ್‌ನ್ನು ಶಿಗ್ಗಾಂವ್‌ಗೆ ಬದಲಾಯಿಸಲು ಕಾರಣವೇನು?

ಈ) ಪ್ರತ್ಯೇಕ ಮಾರುಕಟ್ಟೆ ಮಾಡುವಾಗ ಸರ್ಕಾರದವರು ಅನುಸರಿಸಿದ ನಿಯಮಗಳೇನು?

ಉ) ಕಲಘಟಗಿ ಸಬ್ ಮಾರ್ಕೆಟ್ ಯಾರ್ಡ್‌ನಿಂದ ಸಾಕಷ್ಟು ಆದಾಯವಿದ್ದರೂ ಕೂಡ ಇದನ್ನು ಪ್ರತ್ಯೇಕ ಮಾರುಕಟ್ಟೆ ಸಮಿತಿಯನ್ನಾಗಿ ಮಾಡದಿರಲು ಕಾರಣವೇನು?

ಶ್ರೀ ಮದನ ಗೋಪಾಲ ನಾಯಕ್
(ಮಾರುಕಟ್ಟೆ ರಾಜ್ಯ ಸಚಿವರು)

ಇಂತಹ ಪ್ರಸ್ತಾವ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ
ಉದ್ಭವಿಸುವುದಿಲ್ಲ

ಹುಬ್ಬಳ್ಳಿ ಮಾರುಕಟ್ಟೆ ಸಮಿತಿ ಕ್ಷೇತ್ರವು ವಿಭಜನೆಪೂರ್ವದಲ್ಲಿ ಹುಬ್ಬಳ್ಳಿ, ಶಿಗ್ಗಾಂವ ಮತ್ತು ಕಲಘಟಗಿ ತಾಲ್ಲೂಕುಗಳು ಮತ್ತು ಸವಣೂರು ತಾಲ್ಲೂಕಿನ ೧೨ ಹಳ್ಳಿಗಳನ್ನು ಒಳಗೊಂಡಿತ್ತು. ಈ ವಿಸ್ತಾರವಾದ ಕ್ಷೇತ್ರದಲ್ಲಿ ಮಾರಾಟ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸುವುದು ಕಷ್ಟಸಾಧ್ಯವಾದುದರಿಂದ ಭೌಗೋಳಿಕವಾಗಿ ಹೊಂದಿಕೊಂಡಿರುವ ಶಿಗ್ಗಾಂವಿ ಮತ್ತು ಕಲಘಟಗಿ ತಾಲ್ಲೂಕುಗಳನ್ನು ಸೇರಿಸಿ ಉತ್ತಮ ಸಾರಿಗೆ ಸೌಲಭ್ಯ ವಿರುವ ಶಿಗ್ಗಾಂವಿಯಲ್ಲಿ ಪ್ರತ್ಯೇಕ ಮಾರುಕಟ್ಟೆ ಸಮಿತಿಯನ್ನು ರೈತರ ಹಿತದೃಷ್ಟಿಯಿಂದ ಸ್ಥಾಪಿಸಲಾಗಿದೆ.

ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆ ೧೯೬೬ ರ ಪ್ರಕರಣ ೩,೪.೧೦ ಮತ್ತು ೧೪೫ ರಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಪಾಲಿಸಿದೆ.